UDAYAVANI / HUBBALLI
उदयवाणी / हुब्बल्लि

10 APR 2019

ಹಳಿ ತಪ್ಪಿದ ರೈಲ್ವೆ ಇಲಾಖೆ

# ಆರ್‌ಪಿಎಫ್ ಸಿಬ್ಬಂದಿ ವರ್ಗಾವಣೆ ಬವಣೆ

## ■ ತಮಗೆ ಬೇಕಾದವರಿಗೆ ಸಂಪೂರ್ಣ ವ್ಯವಸ್ಥೆ ■ ಅಮಾಯಕರಿಗೆ ಬೆಂಗಳೂರು, ಮೈಸೂರಿಗೆ ವರ್ಗಾವಣೆ ಶಿಕ್ಷೆ

■ ಶಿವಶಂಕರ ಕಂಠಿ

ಹುಬ್ಬಳ್ಳಿ: ರೈಲ್ವೆ ಸುರಕ್ಷಾ ಬಲ (ಆರ್‌ಪಿಎಫ್)ದಲ್ಲಿ ಕಳೆದ 10 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಿಬ್ಬಂದಿ ವರ್ಗಾವಣೆಯಲ್ಲಿ ಭಾರೀ ತಾರತಮ್ಯ ನಡೆದಿದೆ ಎಂಬ ಆರೋಪ ಕೇಳಿ ಬಂದಿದೆ.

ಆರ್‌ಪಿಎಫ್‌ನ ಮಹಾನಿರ್ದೇಶಕ (ಡಿಜಿ)ರಾಗಿ ಅರುಣ ಕುಮಾರ ಅಧಿಕಾರ ವಹಿಸಿಕೊಂಡ ಮೇಲೆ ಅವರು, ರೈಲ್ವೆ ಬೋರ್ಡ್‌ನ ಆದೇಶವನ್ನು ಮರುಪರಿಶೀಲಿಸಿ, ಇಲಾಖೆಯಲ್ಲಿ ಒಂದೇ ಸ್ಥಳದಲ್ಲಿ 10 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ಡೈರೆಕ್ಟ್ 32 ಆದೇಶದ ಅನ್ವಯ ಬೇರೆ ವಿಭಾಗ/ಸ್ಥಳಕ್ಕೆ ವರ್ಗಾವಣೆಗೊಳಿಸಬೇಕೆಂದು ಫೆಬ್ರವರಿಯಲ್ಲಿ ಆದೇಶಿಸಿದ್ದರು. ಇವರ ಆದೇಶದ ಪ್ರಕಾರ ನೈಋತ್ಯ ರೈಲ್ವೆ (ಎಸ್‌ಡಬ್ಲ್ಯುಆರ್) ವಲಯದಲ್ಲಿ ಸಿಬ್ಬಂದಿ ವರ್ಗಾವಣೆಯಲ್ಲಿ ಸಾಕಷ್ಟು ತಾರತಮ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ ಎಂದು ಸಿಬ್ಬಂದಿ ಆರೋಪಿಸಿದ್ದಾರೆ.

ಎಸ್‌ಡಬ್ಲ್ಯುಆರ್ ಆರ್‌ಪಿಎಫ್ ಪಿಸಿಎಸ್‌ಸಿ ತಮಗೆ ಅನುಕೂಲಕ್ಕೆ ಅನುಗುಣವಾಗಿ ಈ ಆದೇಶ ದುರ್ಬಳಕೆ ಮಾಡಿಕೊಂಡಿದೆ. ತನಗೆ ಬೇಕಾದವರು 15ರಿಂದ 20 ವರ್ಷ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಅವರನ್ನು ಬೇರೆ ವಿಭಾಗಕ್ಕೆ (ಡಿವಿಜನ್) ವರ್ಗಾವಣೆ ಮಾಡದೆ ಹುಬ್ಬಳ್ಳಿ ವಿಭಾಗ ವ್ಯಾಪ್ತಿಯ ಬೆಳಗಾವಿ, ಲೋಂಡಾ, ಗದಗ, ಹೊಸಪೇಟೆಗೆ ಸರಕಾರಿ ಸೌಲಭ್ಯಗಳೊಂದಿಗೆ ವರ್ಗಾವಣೆ ಮಾಡಿದ್ದಾರೆ. ಆ ಸಿಬ್ಬಂದಿ ಸಕಲ ಸವಲತ್ತು ಪಡೆದುಕೊಂಡು ವರ್ಗಾವಣೆಗೊಂಡ ಸ್ಥಳಕ್ಕೆ ಕರ್ತವ್ಯಕ್ಕೆ ಹಾಜರಾದವರಂತೆ ಮಾಡಿದ್ದಾರೆ. ಅಧಿಕಾರಿಗಳು ಅವರನ್ನು ಪುನಃ ಹುಬ್ಬಳ್ಳಿಯಲ್ಲಿಯೇ ಅಟ್ಯಾಚ್‌ಮೆಂಟ್ (ಬಾಂಧವ್ಯ) ಆಧಾರ (ಬೇಸ್) ಮೇಲೆ ಕರೆಸಿಕೊಂಡು ಮೊದಲಿನ ಸ್ಥಳಗಳಲ್ಲಿಯೇ ಕೆಲಸಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಆದರೆ ಇನ್ನುಳಿದವರಿಗೆ 10 ವರ್ಷ ಸೇವೆ ಸಲ್ಲಿಸಿದ್ದರೂ ಅವರನ್ನು ಎಸ್‌ಡಬ್ಲ್ಯುಆರ್ ವಲಯದ ಬೇರೆ ಬೇರೆ ವಿಭಾಗಗಳಾದ ಬೆಂಗಳೂರು, ಮೈಸೂರಿಗೆ ವರ್ಗಾವಣೆ ಮಾಡಿದ್ದಾರೆ.

ಪಿಸಿಎಸ್‌ಸಿಯು ಡಿಜಿ ಆದೇಶವನ್ನು ಉಲ್ಲಂಘಿಸಿ ತಮ್ಮ ತಮಗೆ ಅನುಕೂಲವಾಗುವ ರೀತಿಯಲ್ಲಿ ವರ್ಗಾವಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಇದರಿಂದ ಬಹಳಷ್ಟು ಆರ್‌ಪಿಎಫ್‌ನ ಸದಸ್ಯರ ಕುಟುಂಬಗಳಿಗೆ ತುಂಬಾ ಅನಾನುಕೂಲವಾಗಿದೆ. ಅಲ್ಲದೆ ಸಿಬ್ಬಂದಿಗಳಲ್ಲಿ ಕರ್ತವ್ಯದ ಬಗ್ಗೆ ನಿರಾಸಕ್ತಿ ಉಂಟಾಗಿದೆ. ಈಗಾಗಲೇ ಕೆಲವು ಸಿಬ್ಬಂದಿ ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ತಮ್ಮ ಮಕ್ಕಳನ್ನು ಹೆಚ್ಚಿನ ಪ್ರಮಾಣದಲ್ಲಿ ಡೋನೇಶನ್ ಕೊಟ್ಟು ಶಾಲೆಗಳಿಗೆ ಪ್ರವೇಶಾತಿ ಕೂಡ ಪಡೆದಿದ್ದಾರೆ. ಇನ್ನು ಕೆಲವರು ತಮ್ಮ ವಯೋವೃದ್ಧ ತಂದೆ-ತಾಯಿಯೊಂದಿಗೆ ಇದ್ದು ಅವರ ಆರೈಕೆ ಮಾಡುತ್ತಿದ್ದಾರೆ. ಅವರ ಆರೋಗ್ಯ ಕಾಪಾಡುತ್ತಿದ್ದಾರೆ. ಆದರೆ ಈಗ ಅವರನ್ನೆಲ್ಲ ಒಮ್ಮೇಲೆ ತತ್‌ಕ್ಷಣದಿಂದ ಬೇರೆ ವಿಭಾಗಕ್ಕೆ ವರ್ಗಾವಣೆ ಗೊಳಿಸಿದ್ದರಿಂದ ಅವರು ಮುಂದೇನು ಎಂದು ತೋಚದಂತಾಗಿ ಕಂಗಾಲಾಗಿದ್ದಾರೆ. ಕೆಲವರು ಅನಾರೋಗ್ಯಕ್ಕೊಳಗಾಗಿ ಚಿಕಿತ್ಸೆ ಕೂಡ ಪಡೆಯುತ್ತಿದ್ದಾರೆ.

ಆರ್‌ಪಿಎಫ್‌ಗೆ ಹೊಸದಾಗಿ ಬಂದಿರುವ ಮಹಾನಿರ್ದೇಶಕ ಅರುಣ ಕುಮಾರ ಅವರು ಓರ್ವ ಸಿಬ್ಬಂದಿ ಒಂದೇ ಸ್ಥಳದಲ್ಲೇ ಹಲವು ವರ್ಷಗಳಿಂದ ಕೆಲಸ ಮಾಡುವುದನ್ನು ತಪ್ಪಿಸಲು ಹಾಗೂ ಅಲ್ಲಿನ ಅಧಿಕಾರಿಗಳೊಂದಿಗೆ ಯಾವುದೇ ರೀತಿ ಶಾಮೀಲು ಆಗಬಾರದೆಂದು ಉದ್ದೇಶದಿಂದ ಈ ಆದೇಶವನ್ನು ಸುಮಾರು 13 ವರ್ಷಗಳ ನಂತರ ಪುನರ್ ಪರಿಶೀಲನೆ ಮಾಡಿದ್ದಾರೆ. ಆದರೆ ನೈಋತ್ಯ ರೈಲ್ವೆಯ ಪಿಸಿಎಸ್‌ಸಿ ಅವರು ಡಿಜಿ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತು ಇಲ್ಲದ ಹಾಗೆ ಮಾಡಿ, ತಮಗೆ ಆಪ್ತರಾದ ಸಿಬ್ಬಂದಿಗಳನ್ನು ತಮಗೆ ಬೇಕಾದ ಸ್ಥಳಕ್ಕೆ ವರ್ಗಾವಣೆ ಮಾಡಿ, ಪುನಃ ತಮ್ಮ ಸ್ವ-ಸ್ಥಾನಕ್ಕೆ ಕರೆಯಿಸಿಕೊಂಡಿದ್ದಾರೆ. ಅಧಿಕಾರಿಗಳ ಮುಲಾಜಿಗೊಳಗಾಗದ ಸಿಬ್ಬಂದಿಯನ್ನು ದೂರ ಸ್ಥಳಗಳಿಗೆ, ನಿರ್ಜನ ಪ್ರದೇಶಕ್ಕೆ ವರ್ಗಾವಣೆಗೊಳಿಸಿ ತಮ್ಮ ಅಟ್ಟಹಾಸ ಮೆರೆದಿದ್ದಾರೆ ಎಂದು ಹೆಸರು ಹೇಳಲಿಚ್ಛಿಸಿದ ಕೆಲ ಸಿಬ್ಬಂದಿ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಡಿಜಿ ಸೇರಿದಂತೆ ಮೇಲಾಧಿಕಾರಿಗಳು ಸಿಬ್ಬಂದಿ ವರ್ಗಾವಣೆಯಲ್ಲಾದ ತಾರತಮ್ಯ ನೀತಿ ಸರಿಪಡಿಸುವರೆ ಹಾಗೂ ವರ್ಗಾವಣೆಗೊಂಡಿದ್ದ ಸಿಬ್ಬಂದಿ ಸರಕಾರದ ಎಲ್ಲ ಸವಲತ್ತುಗಳನ್ನು ಪಡೆದು ಪುನಃ ತಮ್ಮ ಸ್ವಸ್ಥಳಕ್ಕೆ ಬಂದವರ ಬಗ್ಗೆ ಕ್ರಮಕ್ಕೈಗೊಳ್ಳುವರೆ. ಇದರಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುವರೆ ಕಾದುನೋಡಬೇಕು.

### ಅಧಿಕಾರಿಗಳು ಹೇಳೋದೇನು

ಆರ್‌ಪಿಎಫ್‌ದಲ್ಲಿ 10 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಿಬ್ಬಂದಿಯ ವರ್ಗಾವಣೆಯಲ್ಲಿ ಯಾವುದೇ ತಾರತಮ್ಯವಾಗಿಲ್ಲ. ಪ್ರಧಾನ ಮುಖ್ಯ ಭದ್ರತಾ ಆಯುಕ್ತರು (ಪಿಸಿಎಸ್‌ಸಿ) ಯಾವ್ಯಾವ ಸಿಬ್ಬಂದಿ ಎಲ್ಲಿಗೆ ವರ್ಗವಾಗಬೇಕೆಂಬುದರ ಪಟ್ಟಿ (ಓಓ) ಸಿದ್ಧಪಡಿಸಿದ್ದರು. ನಂತರ ಇದನ್ನು ಕಾರ್ಯಗತಗೊಳಿಸಲು ಬೆಂಗಳೂರು, ಯಲಹಂಕ, ಹುಬ್ಬಳ್ಳಿಯ ಮೂವರು ವಿಭಾಗೀಯ ಭದ್ರತಾ ಆಯುಕ್ತ(ಡಿಎಸ್‌ಸಿ)ರುಳ್ಳ ಸಮಿತಿ ರಚಿಸಿದ್ದರು. ಅದರಂತೆಯೇ ಸಿಬ್ಬಂದಿಯನ್ನು ಡೈರೆಕ್ಟ್ 32 ಆದೇಶದಂತೆ ವರ್ಗಾವಣೆಗೊಳಿಸಿದ್ದಾರೆ ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

### ಕಾರಣ ಏನು?

10 ವರ್ಷಕ್ಕಿಂತ ಮೇಲ್ಪಟ್ಟು ಹೆಚ್ಚಿನ ಅವಧಿಗೆ ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯನ್ನು ವರ್ಗಾವಣೆಗೊಳಿಸಲು ಪಿಸಿಎಸ್‌ಸಿಯವರು ಪಟ್ಟಿ ಸಿದ್ಧಪಡಿಸಿದ್ದರು. ಅವರೇ ವರ್ಗಾವಣೆಯನ್ನು ಖುದ್ದಾಗಿ ಮಾಡಬೇಕಿತ್ತು. ಅವರು ಮೂವರ ಸಮಿತಿ ರಚಿಸಿದರು. ಸಮಿತಿಯಲ್ಲಿದ್ದವರೆಲ್ಲ ಹೊಸಬರಾಗಿದ್ದಾರೆ. ಅವರು ತಮ್ಮ ಅಧೀನದ ಕಚೇರಿಯಲ್ಲಿ ಕೆಲಸ ಮಾಡುವವರನ್ನು ನಂಬಿ ಅವರು ಸೂಚಿಸಿದ ಸಿಬ್ಬಂದಿಯನ್ನು ವರ್ಗಾವಣೆಗೊಳಿಸಿದ್ದಾರೆ. ಅವರು ತಮಗೆ ಯಾರು ಬೇಕೋ ಅವರನ್ನು ತಮ್ಮ ವಿಭಾಗದ ಕಚೇರಿಯಲ್ಲಿ ಉಳಿಸಿಕೊಂಡು ಇನ್ನುಳಿದವರನ್ನು ಮಾತ್ರ ವರ್ಗಾವಣೆಗೊಳಿಸುವಂತೆ ಸೂಚಿಸಿದ್ದಾರೆ. ಈ ಅವ್ಯವಸ್ಥೆಯೇ ಸಿಬ್ಬಂದಿಗಳಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ತಿಳಿದು ಬಂದಿದೆ.

There is lot of partiality in transfer of RPF staff who have worked more than 10 years in one place.

BUSINESS LINE / HUBBALLI
बिज़नेस लाइन / हुब्बल्लि
10 APR 2019

# NSE arm in lead to conduct online exams for Railways

MAMUNI DAS
New Delhi, April 9

The Railways may consider NSEIT Ltd, a wholly-owned subsidiary of the National Stock Exchange, to conduct a part of its exams, as it readies for the next leg of recruitment in one of the largest hiring exercises globally.

The move is aimed at widening the pool of agencies that can conduct online exams for the Railways. This means that the Tata Consultancy Services (TCS), which was the sole exam-conducting agency for the Railways, may have to face stiff competition and is likely to share the mandate with a second agency.

The NSEIT deals with various aspects of computer software and hardware that includes designing, developing, maintaining, marketing, buying, importing, exporting and licensing them. It had reported a net profit of ₹18 crore in fiscal 2018.

**Online exams**

The market size for online exams, estimated at ₹2,500 crore a year, is expanding, as it shrinks the time for conducting exams and declaring results. It also minimises the physical logistics involved of carrying the documents to the exam centres.

In India, more exams are increasingly being held online. Several companies — TCS iON, Sify, NSEIT and newer firms — are looking to widen their foothold in conducting online exams in an efficient manner.

The NSEIT has also made its mark by conducting exams for the Railway Police Force, which involved 70 lakh candidates, 700 centres spread across 400 cities. It has also invested in a security operations centre. Among its other expertise, the NSEIT has started automating its process for pre- and post-examination tasks.

Scanned by CamScanner

TARUN BHARAT / BELGAVI
तरुण भारत / हुब्बल्लि
10 APR 2019

# मालगाडीमुळे काँग्रेस रोडवर वाहतूक कोंडी

## सिग्नल न मिळाल्यामुळे मालगाडी थांबून पहिल्या रेल्वेगेटनजीक वाहतूक खोळंबून : रहदारी पोलीस नसल्याने वाहतूक कोंडीत भर

प्रतिनिधी
बेळगाव

काँग्रेस रोडचे सध्या काँक्रिटीकरण सुरू आहे. यामुळे या मार्गावरून अवजड वाहतुकीवर निर्बंध घालण्यात आले आहेत. मात्र काँग्रेस रोडवरून एकाच बाजूने वाहतूक सुरू असल्याने वारंवार वाहतूक कोंडी होत आहे. यातच मंगळवारी सायंकाळी रेल्वे मालगाडी पहिल्या रेल्वे गेटनजीक सुमारे १५ मिनिटे थांबून राहिल्याने वाहतूक कोंडीत भर पडली. पहिल्या रेल्वे गेटजवळ रहदारी पोलीस तसेच सिग्नल नसल्याने वाहनचालकांना बराच वेळ ताटकळत राहावे लागले. यामुळे त्यांच्यातून संताप व्यक्त झाला.

मंगळवारी सायंकाळी ६ च्या सुमारास कच्चे तेलवाहू मालगाडी येत असल्याने पहिल्या रेल्वेगेटचे फाटक बंद करण्यात आले. यावेळी नियमित गर्दी झाली होती. मात्र, सिग्नल न मिळाल्याने मालगाडी तेथेच थांबून राहिली. यामुळे पहिल्या रेल्वेगेटसह दुसऱ्या रेल्वे गेटपर्यंत वाहनांची रांग लागली. सुमारे १५ ते २० मिनिटे ही मालगाडी गेटवरच थांबून राहिल्याने काँग्रेस रोडवरील वाहतूक खोळंबली.

या ठिकाणी रहदारी पोलीस नसल्याने कोंडीत भर पडली. यामुळे मालगाडी कधी पुढे जाते आणि रेल्वे फाटक कधी खुले होते याची वाट पाहण्याची वेळ वाहन चालकांवर आली. शेवटी १५ ते २० मिनिटांनंतर सिग्नल मिळाल्याने मालगाडी मार्गस्थ झाली. नंतर वाहनचालकांनी सुटकेचा निःश्वास सोडला.



बेळगाव : मालगाडी थांबून राहिल्याने पहिल्या रेल्वेगेटवर झालेली वाहतूक कोंडी.

News from Tarun Bharat / Belgaum. Heavy traffic Jam due to Stoppage of Goods train at Belgaum 1st gate.

Scanned by CamScanner